ಆ) ಬಂದಿದ್ದಲ್ಲಿ ೧೦-೧೫ ಕಿ.ಗಾಂ. ವಿಕ್ರಯಿಸುವ ಸಣ್ಣ ಬೆಳೆಗಾರ ೨೫-೩೦ ಕಿ.ಮೀ ದೂರದ ಕೇಂದ್ರಗಳಿಗೆ ಅಡಿಕೆ ತೆಗೆದುಕೊಂಡುಹೋಗಬೇಕಾದ ಸಮಸ್ಯೆ ಉಲ್ಬಣಿಸಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಇ) ಅಡಿಕೆ ಬೆಳೆಗಳ ತೋಟಗಾರಿಕೆ ಇಲಾಖೆಯಿಂದ ಪ್ರತ್ಯೇಕ ಕಾರ್ಡು ಮಾಡಿಸಿಕೊಳ್ಳುವ ಅಗತ್ಯವಿದೆಯೇ; ಕ್ಯಾಪ್ಕೋ ಸದಸ್ಯತ್ವ ಸಾಲದೇ ಅಥವಾ ಆರ್.ಟಿ.ಸಿ ಇನ್ನಿತರ ದಾಖಲೆ ಪತ್ರ ಸಂಸ್ಥೆಗೆ ನೀಡಿದರೆ ಸಾಕಾಗುವುದಿಲ್ಲವೆ;

ಈ) ಕ್ಯಾಪ್ಕೋ ಖರೀದಿ ಕೇಂದ್ರಗಳು ಎಲ್ಲೆಲ್ಲಿ ಇವೆಯೋ ಆ ಜಾಗದಲ್ಲಿ ಖರೀದಿ ನಡೆಸಲು ರೈತರಿಗೆ ಅನುಕೂಲ ಮಾಡಲು ಸರ್ಕಾರ ಗಮನಹರಿಸುವುದೇ?

ಉ) ಈ ನಿಟ್ಟಿನಲ್ಲಿ ಪ್ರಸ್ತುತ ೪ ಕೋಟಿ ರೂ. ಮಾತ್ರ ಬಿಡುಗಡೆಗೊಳಿಸಲಾಗಿದ್ದು ಉಳಿದ ೬ ಕೋಟಿ ರೂ. ಯಾವಾಗ ಬಿಡುಗಡೆ ಮಾಡಲಾಗುವುದು. (ವಿವರ ಒದಗಿಸುವುದು)?

ಶ್ರೀ ಪ್ರಕಾಶ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು) :

ಅ) ಬಂದಿದೆ.

ಆ) ತಿಳಿದಿರುತ್ತದೆ.

ಇ) ಅಗತ್ಯವಿದೆ, ಕ್ಯಾಂಪ್ಕೋ ಸದಸ್ಯರಲ್ಲದವರು ಅಥವಾ ಆರ್.ಟಿ.ಸಿಯಲ್ಲಿ ಅಡಿಕೆ ಬೆಳೆ ವಿಸ್ತೀರ್ಣ ದಾಖಲಿಸಿದ ರೈತರು ಇದರ ಪ್ರಯೋಜನ ಪಡೆಯಲು ತೋಟಗಾರಿಕಾ ಇಲಾಖೆಯ ಕಾರ್ಡು ಅತ್ಯಾವಶ್ಯಕವಾಗಿರುತ್ತದೆ.

ಈ) ಹೌದು, ಖರೀದಿ ಕೇಂದ್ರಗಳ ವಿವರಗಳನ್ನು ಅನುಬಂಧ-೧ ರಲ್ಲಿ ನೀಡಲಾಗಿದೆ.

ಉ) ಸರ್ಕಾರದ ಆದೇಶ ಸಂಖ್ಯೆ ಸಿಡಿ ೧೮೧ ಎಂ.ಆರ್.ಇ ೨೦೦೫, ದಿನಾಂಕ ೩೧-೩-೨೦೦೫ ರನ್ವಯ ಆವರ್ತ ನಿಧಿಯಿಂದ ರೂ. ೪.೦೦ ಕೋಟಿಗಳನ್ನು ಬಿಡುಗಡೆ ಮಾಡಿದ ಉಳಿದ ರೂ. ೬ ಕೋಟಿಗಳನ್ನು ಬಿಡುಗಡೆ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

೪೦೨೯ (೪೮೯೧) **ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ)** :- ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಡಿತರ ಚೀಟಿ ಸಂಬಂಧ ಸರ್ವೇ ಕಾರ್ಯದ ಪ್ರಗತಿಯ ವಿವರಗಳೇನು;

ಆ) ಈ ಸರ್ವೇ ಕಾರ್ಯದಿಂದ ಬಿಪಿಎಲ್ ಹಾಗೂ ಎಪಿಎಲ್ ಪಡಿತರ ಚೀಟಿದಾರರೆಷ್ಟು; (ಜಿಲ್ಲಾವಾರು ಹಾಗೂ ಕ್ಷೇತ್ರವಾರು ವಿವರ ನೀಡುವುದು)

ಇ) ಈ ಸರ್ವೇ/ಸಮೀಕ್ಷೆಗೂ ಮುಂಚೆ ಇದ್ದಂತಹ ಬಿಪಿಎಲ್ ಹಾಗೂ ಎಪಿಎಲ್ ಚೀಟಿದಾರರೆಷ್ಟು; (ಜಿಲ್ಲಾವಾರು, ಕ್ಷೇತ್ರವಾರು ವಿವರ ನೀಡುವುದು)

ಈ) ಹೊಸದಾಗಿ ಪಡಿತರ ಚೀಟಿ ನೀಡಲುದ್ದೇಶಿಸುವ ನಿಯಮಗಳಾವುವು; ಯಾವಾಗ ನೀಡಲಾಗುವುದು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಸರ್ವೇ ಕಾರ್ಯವು ಮುಕ್ತಾಯದ ಹಂತದಲ್ಲಿದ್ದು ವಿವರಗಳನ್ನು ಕ್ರೋಢೀಕರಿಸಿರುವುದಿಲ್ಲ.

ಆ) ವಿವರಗಳನ್ನು ಸರ್ವೇ ಕಾರ್ಯವು ಪೂರ್ಣಗೊಂಡ ನಂತರ ನೀಡಬಹುದಾಗಿದೆ.

ಇ) ಸರ್ವೇ ಕಾರ್ಯದ ಪೂರ್ವದಲ್ಲಿದ್ದ ಜಿಲ್ಲಾವಾರು ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಪಡಿತರ ಚೀಟಿಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. ಕ್ಷೇತ್ರವಾರು ವಿವರಗಳು ಲಭ್ಯವಿರುವುದಿಲ್ಲ ಇವುಗಳನ್ನು ಕ್ರೋಢೀಕರಿಸಿ ಸಲ್ಲಿಸಲಾಗುವುದು.

ಈ) ಹೊಸ ಪಡಿತರ ಚೀಟಿಗಳನ್ನು ನೀಡಲು ನಿಗದಿ ಪಡಿಸಿರುವ ಮಾನದಂಡಗಳು ಕೆಳಕಂಡಂತಿದೆ.

೧) ಗ್ರಾಮೀಣ ಪ್ರದೇಶದಲ್ಲಿ ರೂ. ೧೨,೦೦೦ ನಗರ ಪ್ರದೇಶದಲ್ಲಿ ರೂ.೧೭,೦೦೦ಕ್ಕಿಂತ ಕಡಿಮೆ ವಾರ್ಷಿಕ ಆದಾಯವಿರುವ ಕುಟುಂಬಗಳನ್ನು ಬಿಪಿಎಲ್ ಪಡಿತರ ಚೀಟಿ ನೀಡಲು ಪರಿಗಣಿಸಲಾಗುತ್ತಿದೆ.

೨) ೨ ಹೆಕ್ಟೇರ್ ಖುಷ್ಕಿ ತರಿ ಅಥವಾ ಬಾಗಯಾನ ಜಮೀನು, ಅಥವಾ ತತ್ಸಮಾನ ಜಮೀನು ಉಳ್ಳವರು ಸೆಲ್ ಫೋನ್, ಟೆಲಿಫೋನ್, ಪೆಟ್ರೋಲ್ ಮತ್ತು ಡೀಸಲ್‌ಯಿಂದ ಚಲಿಸುವ ೨/೪ ಚಕ್ರದ ವಾಹನಗಳನ್ನು ಹೊಂದಿರುವ ಕುಟುಂಬದವರು, ಮತ್ತು ೧ ಲಕ್ಷ ರೂ.ಗಳನ್ನು ಬ್ಯಾಂಕ್‌ನಲ್ಲಿ ಅಥವಾ ಸೊಸೈಟಿಯಿಂದ ಸಾಲ ಪಡೆದ ಕುಟುಂಬಗಳು ಚಾಲನೆಯಲ್ಲಿರುವ ಬೋರ್‌ವೆಲ್ ಹೊಂದಿರುವ ಕುಟುಂಬಗಳು ತಿಂಗಳಿಗೆ ೧೦೦೦/- ರೂ. ವೇತನವನ್ನು ಪಡೆಯುವ ಸರ್ಕಾರಿ/ಸರ್ಕಾರೇತರ/

ಖಾಸಗಿ ಸಂಸ್ಥೆಗಳು, ಕಾಂಟ್ರ್ಯಾಕ್ಟ್‌ದಾರರಾಗಿ ನೋಂದಾವಣಿ ಮಾಡಲ್ಪಟ್ಟವರು,ಎ.ಪಿ.ಒ.ಸಿ ಬೀಜ ಗೊಬ್ಬರಗಳ ಟ್ರೀಡರ್ಸ್/ಡೀಲರ್ಸ್ ಇತ್ಯಾದಿ ಆಗಿರುವುದನ್ನು ಮೇಲ್ಕಂಡ ವಿಷಯಗಳಲ್ಲಿ ಯಾವುದೇ ಒಂದನ್ನು ಹೊಂದಿದ್ದಲ್ಲಿ ಎ.ಪಿ.ಎಲ್. ಪಡಿತರ ಚೀಟಿದಾರರನ್ನಾಗಿ ಪರಿಗಣಿಸಲಾಗುವುದು. ಗಣಕೀಕೃತ ಪಡಿತರ ಚೀಟಿಗಳನ್ನು ಆಗಸ್ಟ್ ೧೫, ೨೦೦೫ರ ನಂತರ ನೀಡಲಾಗುವುದು.

ANNEXURE

Sl. No.	Name of the District	AAY Cards	BPL Cards	APL Cards	Total
1	2	3	4	5	6
1	Bagalkot	38040	187222	116875	342137
2	Bangalore URA	16609	200961	760156	977726
3	Bangalore Rural	27719	305347	101762	434828
4	Bangalore Urban	10048	244163	157354	411565
5	Belgaum	76207	509626	311168	897001
6	Bellary	52956	226536	153775	433267
7	Bidar	36485	177979	65179	279643
8	Bijapur	45941	201390	131972	379303
9	Chamarajnagar	28665	128976	61846	219487
10	Chikkamagalur	18672	166973	73965	259610
11	Chitradurga	36458	205053	54992	296503
12	D.Kannada	13246	113420	231760	358426
13	Davanagere	42573	213908	91994	348475
14	Dharwad	26379	181098	145588	353065
15	Gadag	25557	109810	73995	209362
16	Gulbarga	83500	365880	232198	681578
17	Hassan	19133	267949	92010	379092
18	Haveri	40491	179440	80474	300405
19	Kodagu	5008	73753	48336	127097
20	Kolar	50586	340965	135332	526883
21	Koppal	33782	124120	65179	223081
22	Mandya	29489	267759	165550	462798
23	Mysore	40374	331259	254801	626434
24	Raichur	48059	145750	142384	336193
25	Shimoga	32973	187420	147694	368087
26	Tumkur	42797	366128	156528	565453
27	Udupi	14567	74212	112927	201706
28	Uttara Kannada	13685	177889	101569	293143
	GRAND TOTAL	950000	6074986	4267363	11292349